152 Sess
330-A SLWO:05

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ಪ್ರಸ್ತಾಪಿಸಿರುವ ನಿಯಮ 330-ಎ ಸೂಚನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರ ಹೇಳಿಕೆ:</u>

* * *

**ವಿಷಯ:-** 2024ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳು ದಿನಾಂಕ:1-3-2024 ರಿಂದ ಪ್ರಾರಂಭವಾಗಿ 22-3-2024ರವರೆಗೆ ನಡೆಯಲಿವೆ. ಸದರಿ ಪರೀಕ್ಷಾ ಕಾರ್ಯಗಳಿಗೆ ಜಾಗೃತದಳ, ಜಿಲ್ಲಾ ಜಾಗೃತದಳ, ಉಪ ಮುಖ್ಯ ಅಧೀಕ್ಷಕರುಗಳ ಹುದ್ದೆಗಳಿಗೆ ಉಪನ್ಯಾಸಕರು/ ಪ್ರಾಂಶುಪಾಲರುಗಳನ್ನು ನೇಮಕ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಸದರಿ ಹುದ್ದೆಗಳಿಗೆ ಸುಮಾರು 500-600 ಕಿ.ಮೀ. ದೂರದ ಪರೀಕ್ಷಾ ಕೇಂದ್ರಗಳಿಗೆ ಉಪನ್ಯಾಸಕರನ್ನು ನಿಯೋಜಿಸಿರುವುದು ಮತ್ತು ಪರೀಕ್ಷಾ ಕೇಂದ್ರಗಳಿರುವ ಕಾಲೇಜಿನ ಸಿಬ್ಬಂದಿಯನ್ನು ಬೇರೆಡೆಯ ದೂರದ ಪ್ರದೇಶಗಳಿಗೆ ನಿಯೋಜಿಸಿರುವುದು ಸೂಕ್ತವಾಗಿರುವುದಿಲ್ಲ. ಉಧಾಹರಣೆಗೆ: ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಜಿಲ್ಲೆಗಳ ಸಿಬ್ಬಂದಿಯನ್ನು ದೂರದ ಧಾರವಾಡ, ಹುಬ್ಬಳ್ಳಿ, ಗುಲ್ಬರ್ಗಾ, ರಾಯಚೂರು, ಬೆಳಗಾವಿ ಜಿಲ್ಲೆಗಳಿಗೆ ನೇಮಿಸಲಾಗಿದೆ. ಇದು ತೀರಾ ಅವೈಜ್ಞಾನಿಕ ಕ್ರಮವಾಗಿದೆ. ಇದರಿಂದಾಗಿ ಉಪನ್ಯಾಸಕರು ತುಂಬಾ ಹಿಂಸೆಗೆ ಒಳಗಾಗಿದ್ದಾರೆ. ಜಾಗೃತದಳ, ಜಿಲ್ಲಾ ಜಾಗೃತ ದಳ ಹಾಗೂ ಉಪ ಮುಖ್ಯ ಅಧೀಕ್ಷಕರು ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಊಟ, ವಸತಿ ಹಾಗೂ ಇತರೆ ಮೂಲಭೂತ ಸೌಕರ್ಯದ ಕೊರತೆ ಉಂಟಾಗಲಿದೆ.

ಆದಕಾರಣ, ಸದರಿ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸಿ. ಈ ಆದೇಶವನ್ನು ಕೂಡಲೇ ಹಿಂಪಡೆದು ಎಂದಿನಂತೆ ಸದರಿ ಹುದ್ದೆಗಳಿಗೆ ನಿಯೋಜಿಸಿರುವ ಉಪನ್ಯಾಸಕರುಗಳನ್ನು ಕರ್ತವ್ಯ ನಿರ್ವಹಿಸುತ್ತಿರುವ ಪಕ್ಕದ ಜಿಲ್ಲಾ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡುವಂತೆ ಹಾಗೂ ಪರೀಕ್ಷಾ ಕೇಂದ್ರಗಳಿರುವ ಕಾಲೇಜಿನ ಉಪನ್ಯಾಸಕ/ಸಿಬ್ಬಂದಿಗಳನ್ನು ಎಂದಿನಂತೆ ಸದರಿ ಕೇಂದ್ರದಲ್ಲೇ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಅನುವು ಮಾಡಿಕೊಡುವಂತೆ ಮತ್ತು 55 ವರ್ಷದ ನಂತರದ ವಯೋಮಾನದವರನ್ನು, ನಿವೃತ್ತಿ ಅಂಚಿನಲ್ಲಿರುವವರನ್ನು, ಅನಾರೋಗ್ಯದಿಂದ ಬಳಲುತ್ತಿರುವವರನ್ನು ಜಾಗೃತದಳ ಕಾರ್ಯಗಳಿಂದ ಕಡ್ಡಾಯವಾಗಿ ವಿನಾಯಿತಿ ನೀಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿರುವ ಬಗ್ಗೆ.

**ಉತ್ತರ:**

ಈಗಾಗಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ವತಿಯಿಂದ 2024ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ದಿನಾಂಕ:01-03-2024 ರಿಂದ 22-03-2024 ರವರೆಗೆ ನಡೆಯುತ್ತಿದ್ದು, ಪರೀಕ್ಷಾ ಕಾರ್ಯಗಳಿಗೆ ಜಾಗೃತದಳ, ಜಿಲ್ಲಾ ಜಾಗೃತದಳ ಉಪ ಮುಖ್ಯ ಅಧೀಕ್ಷಕರುಗಳು, ವಿಶೇಷ ಜಾಗೃತ ದಳಗಳನ್ನು (Spl. Investihation Squad) ನೇಮಿಸಲಾಗಿರುತ್ತದೆ. ದಿನಾಂಕ:28-02-2024ರಂದು ನಡೆದ ಜಿಲ್ಲಾ ಮಟ್ಟದ ಉಪನಿರ್ದೇಶಕರು (ಪದವಿ ಪೂರ್ವ) ರವರ ವಿಡಿಯೋ ಕಾನ್ಫರೆನ್ಸ್ ನಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಗಿರುತ್ತದೆ.

1) 250 ಕಿ.ಮೀ ಗಿಂತ ಹೆಚ್ಚಿನ ದೂರದ ಪರೀಕ್ಷ ಕೇಂದ್ರಗಳಿಗೆ ನಿಯೋಜಿಸಿರುವ ವಿಶೇಷ ಜಾಗೃತದಳದ ಸದಸ್ಯರುಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತಿಲ್ಲ ಇದಕ್ಕೆ

ಬದಲಿ ವ್ಯವಸ್ಥೆಯಾಗಿ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿ ಲಭ್ಯವಿರುವ ಉಪನ್ಯಾಸಕರುಗಳನ್ನು ಪರೀಕ್ಷಾ ಕೇಂದ್ರಗಳಿಗೆ ವಿಶೇಷ ಜಾಗೃತದಳದ ಸದಸ್ಯರುಗಳನ್ನಾಗಿ ನಿಯೋಜಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

2) ನಿವೃತ್ತಿ ಅಂಚಿನಲ್ಲಿರುವ/ಆನಾರೋಗ್ಯದಿಂದ ಬಳಲುತ್ತಿರುವವರಿಗೆ ಜಾಗೃತ ದಳದ ಕಾರ್ಯದಿಂದ ಕೋರಿಕೆ ಮೇರೆಗೆ ವಿನಾಯಿತಿ ನೀಡಲು ಅಗತ್ಯ ಕ್ರಮಕೈಗೊಳ್ಳಲಾಗಿದೆ.

3) ಪರೀಕ್ಷಾ ಕೇಂದ್ರಗಳಿಂದ ವಿಶೇಷ ಜಾಗೃತ ದಳಕ್ಕೆ ಇಬ್ಬರಿಗಿಂತ ಹೆಚ್ಚಿಗೆ ಉಪನ್ಯಾಸಕರನ್ನು ನಿಯೋಜಿಸಿದ್ದಲ್ಲಿ ಸೇವೆಯಲ್ಲಿ ಕಿರಿಯವರಾದ ಇಬ್ಬರು ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಸೂಚಿಸಲಾಗಿದೆ.

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸಂಖ್ಯೆ: ಇಪಿ 80 ಡಿಜಿಡಬ್ಲ್ಯೂ 2024